**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ ಮೂಡಿಗೆರೆ**

**ಸಿ.ಸಿ.ನಂಬರ್ಃ389/2022**

ಸಿಡಬ್ಲ್ಯೂಃ 1
ಪಿಡಬ್ಲ್ಯೂಃ 1

| | | |
|---|---|---|
| ಸಾಕ್ಷಿಯ ಹೆಸರು | : | ಸಲಿತಾ |
| ಗಂಡನ ಹೆಸರು | : | ಸುರೇಶ್ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಕಿತ್ತಳೆಗಂಡಿ |

ಇಂದು ದಿನಾಂಕಃ22.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

ಆರೋಪಿ ನನಗೆ ಗೊತ್ತು. ನಾನು ಕಿತ್ತಳೆಗಂಡಿ ಗ್ರಾಮದಲ್ಲಿ ನನ್ನ ಗಂಡ ಮತ್ತು ಮಕ್ಕಳೊಂದಿಗೆ ವಾಸವಾಗಿರುತ್ತೇನೆ. ಆಗ ಆರೋಪಿ ನನಗೆ ಪರಿಚಯವಾಗಿರುತ್ತಾರೆ. ಅವರು ನನ್ನ ಜೊತೆ ಫೋನಿನಲ್ಲಿ ಮಾತನಾಡುತ್ತಿದ್ದರು. ತುಂಬಾ ಬಾರಿ ಆರೋಪಿ ನಮ್ಮ ಮನೆಗೆ ಬಂದು ನನ್ನ ಮೇಲೆ ಅತ್ಯಾಚಾರ ಮಾಡಲ ಪ್ರಯತ್ನಿಸಿರುತ್ತಾರೆ. ಅವರು ನನ್ನ ಮುಖಕ್ಕೆ ಹೊಡೆದು ಬಟ್ಟೆಯನ್ನು ಹರಿದಿರುತ್ತಾರೆ. ಆ ವಿಚಾರವನ್ನು ನನ್ನ ಗಂಡನಿಗೆ ಹೇಳುತ್ತೇನೆ ಹಾಗೂ ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ದಿನಾಂಕಃ18.11.2021 ರಂದು ರಾತ್ರಿ 10 ಗಂಟೆಗೆ ನಾನು ಮನೆಯಲ್ಲಿದ್ದೆ. ಆರೋಪಿ ನಮ್ಮ ಮನೆಗೆ ಬಂದು ನನ್ನ ಬಟ್ಟೆಯನ್ನು ಎಳೆದು ಅತ್ಯಾಚಾರ ಮಾಡಲು ಪ್ರಯತ್ನಿಸಿರುತ್ತಾರೆ. ಆ ವಿಚಾರವನ್ನು ಚಾಸಾ-2, 4 ಮತ್ತು 5 ರವರಿಗೆ ತಿಳಿಸಿರುತ್ತೇನೆ. ನಂತರ ಆರೋಪಿಯನ್ನು ಚಾಸಾ-4 ಮತ್ತು 5 ರವರು ಕರೆಯಿಸಿ ಪಂಚಾಯಿತಿಯನ್ನು ಮಾಡಿರುತ್ತಾರೆ. ಆ ಪಂಚಾಯಿತಿಯಲ್ಲಿ ಆರೋಪಿಯು ಊರು ಬಿಟ್ಟು ಹೋಗುವಂತೆ ಹೇಳಿದ್ದರೂ ಸಹ, ಊರು ಬಿಟ್ಟು ಹೋಗಿರುವುದಿಲ್ಲ. ಕಾರಣ ನಾನು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಲು ಹೋಗಿ, ಹಾಗೆಯೇ ವಾಪಾಸು ಬಂದಿರುತ್ತೇನೆ. ಆರೋಪಿಯು ನನ್ನ ವಿರುದ್ದ ಅಪಪ್ರಚಾರ ಮಾಡಿಕೊಂಡು ಊರಿನಲ್ಲಿ ತಿರುಗಾಡಿಕೊಂಡಿದ್ದ. ದಿನಾಂಕಃ21.11.2021 ರಂದು ಬೆಳಿಗ್ಗೆ 10 ಗಂಟೆಗೆ ನಮ್ಮ ಮನೆಯಲ್ಲಿ ತಂದಿಟ್ಟಿದ ಬಾಳೆಯ ಕೀಟನಾಶಕವನ್ನು ಕುಡಿದು ಆತ್ಯಹತ್ಯೆಯನ್ನು ಮಾಡಿಕೊಳ್ಳಲು ಪ್ರಯತ್ನಿಸಿದ್ದೆ. ಆ ವಿಚಾರವನ್ನು ನಾನು ನನ್ನ ಗಂಡನಿಗೆ ಫೋನು ಮಾಡಿ ತಿಳಿಸಿದ್ದು ಅವರು ಕೆಲಸದಿಂದ ವಾಪಾಸು ಬಂದು ನನ್ನನ್ನು ಮೂಡಿಗೆರೆಯ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ನಂತರ ನನ್ನನ್ನು ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಅಲ್ಲಿ ದಿನಾಂಕಃ22.11.2021 ರಂದು ಪೊಲೀಸರು ಬಂದು ನನ್ನ ಹೇಳಿಕೆ ದೂರನ್ನು ಪಡೆದುಕೊಂಡಿರುತ್ತಾರೆ. ದಿನಾಂಕಃ02.12.2021 ರಂದು ನಾನು ನ್ಯಾಯಾಧೀಶರ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ದಿನಾಂಕಃ04.12.2021 ರಂದು 11.45 ರಿಂದ 12.45 ರ

ಅವದಿಯಲ್ಲಿ ಪೊಲೀಸರು ನಮ್ಮ ಮನೆಗೆ ಬಂದು ಚಾಸಾ-7 ಮತ್ತು 8 ರವರ ಸಮಕ್ಷಮ ಘಟನಾ ನಡೆದ ಸ್ಥಳದ ಪಂಚನಾಮೆ ಮಾಡಿ ಫೋಟೋ ತೆಗೆದಿರುತ್ತಾರೆ. ದಿನಾಂಕಃ06.12.2021 ರಂದು ಪೊಲೀಸರು ಕೀಟನಾಶಕ ಪ್ಯಾಕೆಟುಗಳನ್ನು ತರಲು ಹೇಳಿದ್ದು ಅದರಂತೆ ನಾನು ಅವುಗಳನ್ನು ಅವರಿಗೆ ನೀಡಿದ್ದು, ಆ ಸಂಬಂಧ ಬೆಳಿಗ್ಗೆ 11.05 ರಿಂದ 12.05 ರ ಅವದಿಯಲಿ ಪಂಚನಾಮೆ ಮಾಡಿ ಜಪ್ತು ಮಾಡಿಕೊಂಡಿರುತ್ತಾರೆ. ಆ ಕಾಲಕ್ಕೆ ಚಾಸಾ-9 ಮತ್ತು 10 ಇದ್ದರು ಹಾಗೂ ಅಲ್ಲಿಯೂ ಸಹ ಫೋಟೋ ತೆಗೆದಿರುತ್ತಾರೆ. ಸಾಕ್ಷಿಯು ತಾವು ನೀಡಿದ ದೂರು, ಸ್ಥಳ ಪಂಚನಾಮೆ, ಆ ಕಾಲಕ್ಕೆ ತೆಗೆದ ಎರಡು ಫೋಟೋ, ಜಪ್ತು ಪಂಚನಾಮೆ, ಆ ಕಾಲಕ್ಕೆ ತೆಗೆದ ಫೋಟೋ, ಫೋಟೋಗಳಿಗೆ ಸಂಬಂದಿಸಿದ ಸಿ.ಡಿ., ಮತ್ತು ಸರ್ಟಿಫಿಕೇಟ್ ಹಾಗೂ ಅವುಗಳ ಮೇಲಿನ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ, ಸದರಿ ದಾಖಲೆಗಳನ್ನು ನಿಪಿ-1 ರಿಂದ 9 ಹಾಗೂ ಸಾಕ್ಷಿಯ ಸಹಿಗಳನ್ನು ನಿಪಿ-1 ಎ, 2 ಎ, 5 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಕಡತದಲ್ಲಿದ್ದ ಸಾಕ್ಷಿಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 164 ರಡಿಯಲ್ಲಿನ ಹೇಳಿಕೆಯ ಮುಚ್ಚಿದ ಲಕೋಟೆಯನ್ನು ತೆರೆದು ಅದರಲ್ಲಿದ್ದ ಹೇಳಿಕೆಯನ್ನು ಸಾಕ್ಷಿಗೆ ತೋರಿಸಲಾಗಿ ತಮ್ಮದೇ ಎಂದು ಒಪ್ಪಿಕೊಂಡ ಕಾರಣ ಸದರಿ ದಾಖಲಾತಿಯನ್ನು ನಿಪಿ-10 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-10 ಎ ಎಂದು ಗುರುತಿಸಲಾಯಿತು. ಸಾಕ್ಷಿಯ ನ್ಯಾಯಾಲಯದ ಮುಂದೆ ಇರುವ ಒಂದು ಹಳದಿ ಬ್ಯಾಗ್, ಅದರಲ್ಲಿರುವ ಒಂದು ಹೂವಿನ ಚಿತ್ರವಿರುವ ಚೆಕ್ಸ್ ಬಣ್ಣದ ನೈಟಿ, ಕೀಟನಾಶಕದ ಒಂದು ಪ್ಯಾಕೆಟು ಹಾಗು ಅದರ ಮೇಲಿನ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ, ಅವುಗಳನ್ನು ಮುದ್ದೆಮಾಲು-1 ರಿಂದ 3 ಹಾಗೂ ಸಾಕ್ಷಿಯ ಸಹಿಗಳನ್ನು ಮುದ್ದೆಮಾಲು-1 ಎ ಮತ್ತು 3 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿದ್ದ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ</u>** ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ

1. ನಾನು ಕಿತ್ತಳೆಗಂಡಿ ಗ್ರಾಮದಲ್ಲಿ 10-11 ವರ್ಷಗಳಿಂದ ನನ್ನ ಸ್ವಂತ ಮನೆಯಲ್ಲಿ ವಾಸವಿದ್ದೇನೆ. ನಾನು ಕೂಲಿ ಕೆಲಸಕ್ಕೆ ಹೋಗುತ್ತೇನೆ. ನವೆಂಬರ್ 2021 ರಲ್ಲಿ ನಾನು ಕೆಲಸಕ್ಕೆ ಹೋಗುತ್ತಿರಲಿಲ್ಲ. ಚಾಸಾ-2 ನನ್ನ ಗಂಡ. ಚಾಸಾ-3 ನನ್ನ ಮಾವನ ಮಗ. ಚಾಸಾ-4 ಮತ್ತು 5 ನಮ್ಮ ಊರಿನವರು. ನಾನು ಚಾಸಾ-4 ರವರ ತೋಟದ ಕೆಲಸಕ್ಕೆ ಹೋಗಿಲ್ಲ. ಆರೋಪಿ ನಮ್ಮ ಊರಿನಲ್ಲಿ ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ವಾಸವಾಗಿದ್ದಾರೆ. ಆರೋಪಿಗೆ ಮದುವೆಯಾಗಿ ಮಕ್ಕಳಿವೆ ಎಂದರೆ ಸರಿ. ನನಗೆ ಇಬ್ಬರು ಮಕ್ಕಳು. ಚಾಸಾ-2 ಕೂಲಿ ಕೆಲಸ ಮಾಡುತ್ತಾರೆ. ಅವರು ಕೂಲಿ ಕೆಲಸದಿಂದ 3 ಗಂಟೆಗ ಬಂದು, ನಂತರ ಹೆಚ್ಚಿನ ಕೆಲಸಕ್ಕೆ ಹೋಗುತ್ತಾರೆ. ಅವರು ಹೆಚ್ಚಿನ ಕೆಲಸಕ್ಕೆ ಹೋಗಿ ಸಂಜೆ 6 ಗಂಟೆಗೆ ಮನೆಗೆ ಬರುತ್ತಾರೆ, ಆದರೆ ಮೆಣಸು, ಕಾಫಿ ಕುಯುವ ಕೆಲಸದಲ್ಲಿ ಸಂಜೆ 8 ಗಂಟೆಗೆ ಬರುತ್ತಾರೆ. ಆರೋಪಿ ನನಗೆ 3-4 ವರ್ಷಗಳಿಂದ ಪರಿಚಯ. 2021 ನೇ ಸಾಲಿನಲ್ಲಿ ಆರೋಪಿ ಸುಮಾರು 6-7

ತಿಂಗಳು ಫೋನಿನಲ್ಲಿ ಮಾತನಾಡಿದ್ದರು. ನಾನು ಅವರಿಗೆ ಕರೆ ಮಾಡಿಲ್ಲ, ಆದರೆ ನಾನು ಮತ್ತು ಆರೋಪಿಯ ಹೆಂಡತಿ ಒಟ್ಟಿಗೆ ಕೆಲಸಕ್ಕೆ ಹೋದಾಗ ಆರೋಪಿ ಕರೆ ಸ್ವೀಕರಿಸಿ ಮಾತನಾಡಿದ್ದಾರೆ.

2. ಆರೋಪಿ ಆಗಾಗೆ ನನ್ನ ಮನೆಗೆ ಬಂದು ಬಲತ್ಕಾರ ಮಾಡಲು ಪ್ರಯತ್ನಿಸಿರುವ ವಿಚಾರವನ್ನು ಪೊಲೀಸರಿಗೆ ತಿಳಿಸಿಲ್ಲ. ಆ ವಿಚಾರವನ್ನು ಚಾಸಾ-2 ರವರಿಗೆ ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿ ಹೇಳಿದ್ದೆ. ಗಲಾಟೆಯಾದ ನಂತರ ಪೊಲೀಸ್ ಠಾಣೆಗೆ ನಾನು ದೂರು ನೀಡಲು ಹೋಗಿದ್ದೆ. ಆದರೆ ದೂರು ನೀಡದೇ ವಾಪಾಸು ಬಂದಿರುತ್ತೇವೆ. ದೂರು ನೀಡಲು ಹೋದ ದಿನಾಂಕ ನನಗೆ ಸರಿಯಾಗಿ ನೆನಪಿಲ್ಲ. ದೂರು ನೀಡಲು ನಾನು, ಚಾಸಾ-4 ಮತ್ತು 6 ರವರು ಹೋಗಿರುತ್ತೇವೆ. ಆ ದಿನ ಪೊಲೀಸರು ಆರೋಪಿಯನ್ನು ಕರೆಸಿಲ್ಲ. ಆ ವಿಚಾರವನ್ನು ನಾನು ನಿಪಿ-1 ದೂರನಲ್ಲಿ ಹೇಳಿಲ್ಲ. ಆರೋಪಿ ಎರಡು ಮೂರು ಬಾರಿ ಬಲತ್ಕರಿಸಲು ಪ್ರಯತ್ನಿಸಿರುತ್ತಾರೆ. ಆ ರೀತಿ ಪ್ರಯತ್ನಿಸಿದ ದಿನಾಂಕ ನನಗೆ ಹೇಳಲು ಆಗುವುದಿಲ್ಲ. ನಾನು ರಾತ್ರಿ 9.30 ಗಂಟೆಗೆ ಊಟ ಮಾಡಿ ಮಲಗುತ್ತೇನೆ. ದಿನಾಂಕಃ18.11.2021 ರಂದು ನಾನು ಎಷ್ಟು ಗಂಟೆಗೆ ಮಲಗಿರುತ್ತೇನೆ ಎಂದು ನನಗೆ ನೆನಪಿಲ್ಲ. ನಮ್ಮ ಮನೆಯ ಅಕ್ಕ ಪಕ್ಕ ಮನೆಗಳು ಇವೆ ಎಂದರೆ ಸರಿ. ಘಟನೆಯಾಯಿತು ಎಂದು ಹೇಳಿದ ದಿನಾಂಕ ಚಾಸಾ-2 ಮನೆಯಲ್ಲಿಯೇ ಇದ್ದರು. ಆರೋಪಿ ಬಲತ್ಕಾರ ಮಾಡಲು ಪ್ರಯತ್ನಿಸಿದ ವಿಚಾರವನ್ನು ಅದೇ ದಿನ ಚಾಸಾ-2 ರವರಿಗೆ ತಿಳಿಸಿದ್ದೆ.

3. ಆರೋಪಿ ಸೌದೆ ಕೊಟ್ಟಿಗೆಯ ಹತ್ತಿರವೇ ನನ್ನನ್ನು ಬಲತ್ಕಾರ ಮಾಡಲು ಪ್ರಯತ್ನಿಸಿದ್ದರು. ಸೌದೆ ಕೊಟ್ಟಿಗೆಯಲ್ಲಿ ಸೌದೆಗಳು ಇರಲಿಲ್ಲ. ಸೌದೆ ಕೊಟ್ಟಿಗೆಗೆ ರಾತ್ರಿ ಯಲ್ಲಿ ನೀವು ಏಕೆ ಹುಗಿದ್ದೀರಿ ಎಂದರೆ ಸಾಕ್ಷಿಯು ಶೌಚಾಲಯಕ್ಕೆ ಅಲ್ಲಿಗೆ ಹೋಗಬೇಕು ಎಂದು ನುಡಿಯುತ್ತಾರೆ. ಆರೋಪಿ ಆ ರೀತಿ ಪ್ರಯತ್ನಿಸಿದಾಗ ನಾನು ಕೂಗಿದ್ದು ನನಗೆ ಹೊಡೆದಿರುತ್ತಾರೆ. ಆ ಸಂದರ್ಭದಲ್ಲಿ ಅಕ್ಕ ಪಕ್ಕದ ಮನೆಯವರು ಬರಲಿಲ್ಲ. ಆ ಕಾಲಕ್ಕೆ ಯಾಜಮಾನರೂ ಸಹ ಬರಲಿಲ್ಲ. ಸೌದೆ ಕೊಟ್ಟಿಗೆಗೆ ವಿದ್ಯುತ್ ಸಂಪರ್ಕ ಇಲ್ಲ. ಬೀದಿಯ ದೀಪ ಅಂಗಳಕ್ಕೆ ಬೀಳುತ್ತಿದ್ದು ಆ ಕಾರಣದಿಂದ ಆರೋಪಿಯೇ ಬಂದಿದ್ದರು ಎಂದು ನನಗೆ ಗೊತ್ತಾಯಿತು. ನಮ್ಮ ಕೊಟ್ಟಿಗೆಗೆ ಬೀದಿ ದೀಪದ ಬೆಳಕು ಬೀಳುವುದಿಲ್ಲ. ಆ ದಿನ ಆರೋಪಿ ನನಗೆ ಪೋನು ಅಥವಾ ಮೆಸೇಜ್ ಮಾಡಿಲ್ಲ. ಆರೋಪಿಯ ಪೋನು ನಂಬರ್ ನನಗೆ ಈಗ ನೆನಪಿಲ್ಲ. ಆರೋಪಿ ಸುಮಾರು 10 ನಿಮಿಷ ನಮ್ಮ ಮನೆಯ ಹತ್ತಿರವೇ ಇದ್ದರು. ನಾನು ಆರೋಪಿಯಿಂದ ಬಿಳಿಸಿಕೊಳ್ಳಲು ಪ್ರಯತ್ನಿಸಿದ್ದ ಆ ಕಾಲಕ್ಕೆ ಆರೋಪಿ ನನ್ನ ನೈಟಿ ಹರಿದುಹಾಕಿರುತ್ತಾರೆ. ಆರೋಪಿ ಆ ದಿನ ಬ್ಲಾಕ್ ಕಲರ್ ಜೆರ್ಕಿ ಹಾಕಿದ್ದ ಉಳಿದ ಬಟ್ಟೆಗಳ ಬಗ್ಗೆ ನನಗೆ ಗೊತ್ತಿಲ್ಲ.

4. ಘಟನೆಯಾದ ದಿನವೇ ಪೊಲೀಸರಿಗೆ ದೂರು ನೀಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನನ್ನ ಗಂಡನಿಗೆ ಆ ವಿಚಾರ ತಿಳಿಸಿದೆ ಅವರು ಪಂಚಾಯಿತಿ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ದಿನಾಂಕಃ21.11.2021 ರಂದು ಪಂಚಾಯಿತಿ ಆಗಿರುತ್ತದೆ. ಸದರಿ ಪಂಚಾಯಿತಿಯನ್ನು ಚಾಸಾ-4 ರಿಂದ 7 ರವರು ನಮ್ಮ ಮನೆಯಲ್ಲಿ ಮಾಡಿರುತ್ತಾರೆ. ಆ ಪಂಚಾಯಿತಿಗೆ ಆರೋಪಿ ಬಂದಿದ್ದರು. ಆರೋಪಿ ಯಾವುದೇ ಮುಚ್ಚಳಿಕೆ ಬರೆದುಕೊಟ್ಟಿಲ್ಲ. ಆದರೆ ದೂರು ಕೊಡುತ್ತೇವೆ ಎಂದು ಹೇಳಿದಾಗ ಅವರ ಮನೆಯವರು ಊರು ಬಿಟ್ಟುಹೋಗುತ್ತೇವೆ ಎಂದು ಹೇಳಿರುತ್ತಾರೆ. ಆ ಸಂದರ್ಭಕ್ಕೆ ಆರೋಪಿಯ ತಮ್ಮ ರಾಜು ಬಂದಿದ್ದರು. ಅವರ ಪರಿಚಯವು ಸಹ ನನಗೆ ಮೊದಲಿನಿಂದಲೂ ಇತ್ತು. ಪಂಚಾಯಿತಿಯಾದ ಮೂರು ದಿನಕ್ಕೆ ನಾನು ಆತ್ಮಹತ್ಯೆಗೆ ಪ್ರಯತ್ನಿಸಿರುತ್ತೇನೆ. ಆರೋಪಿ ಎಡತೋಳಿನ ಹತ್ತಿರ ನೈಟಿಯನ್ನು ಹರಿದುಹಾಕಿರುತ್ತಾರೆ. ಎಂಒ-2 ಅನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ಹರಿದಿರುವುದು ಬ್ಲೇಡಿನಿಂದ ಕತ್ತರಿಸಿದ ಇದೆ ಎಂದು ಸೂಚಿಸಲಾಗಿ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ತೋಳಿನ ಹೊರತುಪಡಿಸಿ ಬೇರೆ ಕಡೆ ನೈಟಿ ಹರಿದಿರುವುದನ್ನು ನಾನು ಗಮನಿಸಿಲ್ಲ. ನೈಟಿಯನ್ನು ಪೊಲೀಸರು ಮಹಜರಿಗೆ ಬಂದು ದಿನ ಅವರ ವಶಕ್ಕ ನೀಡಿರುತ್ತೇನೆ. ಆ ದಿನ ದಿನಾಂಕಃ04.12.2021 ಆಗಿರುತ್ತದೆ. ಪೊಲೀಸರು 11.45 ಕ್ಕೆ ಸ್ಥಳಕ್ಕೆ ಬಂದಿರುತ್ತಾರೆ.

5. ನಮಗೆ ತೋಟ ಇದೆ. ಎಂಒ-3 ಕೀಟನಾಶಕವನ್ನು ಬಾಳೆ ಮತ್ತು ಮೆಣಸಿನ ಗಿಡಕ್ಕೆ ತಂದಿರುತ್ತೇವೆ. ದಿನಾಂಕಃ06.12.2021 ರಂದು ಎಂಒ-3 ಅನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ. ಕೀಟನಾಶಕ ಕುಡಿದಾಗ ಮನೆಯಲ್ಲಿ ಯಾರು ಇರಲಿಲ್ಲ. ಆ ಕಾಲಕ್ಕೆ ಮನೆಯವರು ನನ್ನ ತವರು ಮನೆಗೆ ಹೋಗಿದ್ದರು. ಆ ದಿನ ನನ್ನ ಗಂಡ ಕೆಲಸಕ್ಕೆ ಹೋಗಿದ್ದರು. ನಾನು ಕರೆ ಮಾಡಿದ ನಂತರ ಅವರು ಬೆಳಿಗ್ಗೆ 10.30 ಗಂಟೆಗೆ ಮನೆಗೆ ಬಂದಿರುತ್ತಾರೆ. ಆ ದಿನ ಆಸ್ಪತ್ರೆಗೆ ಆಟೋದಲ್ಲಿ ಬಂದಿರುತ್ತೇವೆ. ಆಟೋವನ್ನು ಚಾಸಾ-6 ಕಳುಹಿಸಿದ್ದರು. ಆ ವಿಚಾರವನ್ನು ನನ್ನ ದೂರನಲ್ಲಿ ನಮೂದಿಸಿಲ್ಲ. ಆಸ್ಪತ್ರೆಗೆ ಆ ದಿನ ಚಾಸಾ-2 ಬಂದಿದ್ದರು. ಆಗ 11 ಗಂಟೆಯಾಗಿತ್ತು. ಅರ್ಧ ನಾನು ಮೂಡಿಗೆರೆ ಆಸ್ಪತ್ರೆಯಲ್ಲಿದ್ದೆ.ಆನಂತರ ಹಾಸನದ ಆಸ್ಪತ್ರೆಗೆ ಹೋಗಿರುತ್ತೇವೆ. ಅಲ್ಲಿಗೆ ಅಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ಹೋಗಿರುತ್ತೇವೆ. ದಿನಾಂಕಃ22.11.2021 ರಂದು ಪೊಲೀಸರು ನನ್ನ ಹೇಳಿಕೆ ದೂರನ್ನು ಪಡೆದಿರುತ್ತಾರೆ. ನಡೆದ ಎಲ್ಲಾ ವಿಚಾರಗಳನ್ನು ನಾನು ಹೇಳಿರುತ್ತೇನೆ.

6. ಸೌದೆ ಕೊಟ್ಟಿಗೆ ನಮ್ಮ ಮನೆಯ ಎಡಭಾಗದಲ್ಲಿ ಬರುತ್ತದೆ, ಆದರೆ ನನಗೆ ದಿಕ್ಕನ್ನು ಹೇಳಲು ಆಗುವುದಿಲ್ಲ. ಮಹಜರಿಗೆ ಬಂದಾಗ ಎಂಒ-2 ಅನ್ನು ಪೊಲೀಸರಿಗೆ ತೋರಿಸಿದ್ದೆ, ಆದರೆ ಎಂಒ-3 ಅನ್ನು ತೋರಿಸಿರಲಿಲ್ಲ. ಆ ಕಾಲಕ್ಕ ಎಂಒ-3 ಮನೆಯಲ್ಲಿಯೇ ಇತ್ತು. ಅದನ್ನು ತೋರಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಪೊಲೀಸರು ಆ ದಿನ ಕೇಳಲಿಲ್ಲ ಎಂದು ನುಡಿಯುತ್ತಾರೆ. ಚಾಸಾ-7 ಮತ್ತು

8 ರವರನ್ನು ಯಾರು ಕರೆಸಿದ್ದರು ಎಂದು ನನಗೆ ಗೊತ್ತಿಲ್ಲ. ಅವರು ಪೊಲೀಸರು ಬಂದ ತಕ್ಷಣ ನಮ್ಮ ಮನೆಯ ಹತ್ತಿರ ಬಂದಿರುತ್ತಾರೆ. ಮಹಜರಿಗೆ ಪೊಲೀಸರು ಬಂದಾಗ ಆರೋಪಿ ಊರಿನಲ್ಲಿ ಇದ್ದಾರ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮಹಜರನ್ನು ಪೊಲೀಸರೆ ಬರೆದಿರುತ್ತಾರೆ. ಮಹಜರ್ ಬರೆದ ಸ್ಥಳದ ಚಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ಮಹಜರಿನಲ್ಲ ಬರೆದ ಸಂಗತಿಗಳನ್ನು ನಾನು ಓದಿ ನೋಡಿಲ್ಲ. ಪೊಲೀಸರು ಸಹಿ ಮಾಡು ಎಂದು ಹೇಳಿದ ಕಾರಣ ನಾನು ಸಹಿ ಮಾಡಿರುತ್ತೇನೆ.

7. ನಿಪಿ-3 ರಲ್ಲಿ ಫೋಟೋದಲ್ಲಿ ಸೌದೆ ಕಾಣಿಸುತ್ತಿವೆ ಎಂದರೆ ಸರಿ. ಸದರಿ ಫೋಟೋದಲ್ಲಿ ನೈಟಿ ಹರಿದಿರುವುದು ಕಾಣಿಸುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಫೋಟೋದಲ್ಲಿ ಅದು ಹೇಗೆ ಕಾಣಿಸುತ್ತದೆ ಎಂದು ನುಡಿಯುತ್ತಾರೆ. ಪೊಲೀಸರೆ ಆ ಫೋಟೋವನ್ನು ತೆಗೆದಿರುತ್ತಾರೆ. ಆರೋಪಿ ಅತ್ಯಾಚಾರ ಮಾಡಲು ಪ್ರಯತ್ನಿಸಿ, ಪರಚಿದ ಬಗ್ಗೆ ಮತ್ತು ಮುಖಕ್ಕೆ ಹೊಡೆದ ಬಗ್ಗೆ ನಾನು ಡಾಕ್ಟರಿಗೆ ಹೇಳಿಲ್ಲ, ಆದರೆ ಆತ್ಮಹತ್ಯೆ ಮಾಡಿದ ಬಗ್ಗೆ ಹೇಳಿರುತ್ತೇನೆ. ಎಂಒ-3 ರಂತಹ ವಸ್ತುಗಳನ್ನು ಕೀಟನಾಶಕಗಳ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಎಂಒ-2 ಅನ್ನ ಪೊಲೀಸರು ಠಾಣೆಯಲ್ಲಿ ಜಪ್ತು ಮಾಡಿಕೊಂಡಿರುತ್ತಾರೆ. ನಾನು ಮತ್ತು ಚಾಸಾ-2 ಪೊಲೀಸ್ ಠಾಣೆಗೆ ಹೋಗಿದ್ದೇವು. ನಂತರ ಸಾಕ್ಷಿದಾರರನ್ನು ಪೊಲಿಸೇರು ಹೇಳಿದ ಮೇರೆಗೆ ನಾವೇ ಕರೆಸಿರುತ್ತೇವೆ. ಮುದ್ದೆಮಾಲು 1 ರಿಂದ 3 ವಸ್ತುಗಳನ್ನು ಈ ಪ್ರಕರಣಕೋಸ್ಕರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

8. ಆರೋಪಿಯ ಜೊತೆ ನಾನು ಒಟ್ಟಿಗೆ ಹೋಗುತ್ತಿದ್ದೆ. ಆಗ ಆರೋಪಿಯ ಹೆಂಡತಿಯ ಜೊತೆ ಕೆಲಸದ ಸಂಬಂಧ ನನಗೆ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ಆ ವಿಚಾರವಾಗಿ ಆರೋಪಿ ಏಕೆ ಗಲಾಟೆ ಮಾಡುತ್ತೀಯ ಎಂದು ಕೇಳಿದ್ದರು ಎಂದರೆ ಸರಿಯಲ್ಲ. ಅದರಿಂದ ನಾನು ಈ ರೀತಿ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವ ರೀತಿಯಲ್ಲಿ ಯಾವುದೇ ಘಟನೆ ಸಂಭವಿಸಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಘಟನೆಯಾಗಿದ್ದರೆ ಅದೇ ದಿನ ದೂರು ನೀಡುತ್ತಿದ್ದೆ ಎಂದರೆ ಸಾಕ್ಷಿಯು ಗಂಡನಿಗ ಕೊಲೆ ಮಾಡುತ್ತೇನೆ ಎಂದು ಆರೋಪಿ ಬೆದರಿಸ್ಸಿದರು ಎಂದು ನುಡಿಯುತ್ತಾರೆ. ನಾನು ಮತ್ತು ಚಾಸಾ-2 ಚೆನ್ನಾಗಿದ್ದೇವೆ. ನನ್ನ ಮತ್ತು ಚಾಸಾ-2 ರವರ ನಡುವೆ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ಆ ಕಾರಣಕ್ಕೆ ನಾನು ಎಂಒ-3 ಕೀಟನಾಶಕವನ್ನು ಕುಡಿದಿದ್ದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಎಲ್ಲ ದಾಖಲಾತಿಗಳನ್ನು ನಾನು ಮತ್ತು ಪೊಲೀಸರು ಸೇರಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ